O.S. NO. 243/2022
PW –1 .
Dated 01–10–2024.

ಸಾಕ್ಷಿಯನ್ನು ಈ ದಿನ ದಿನಾಂಕ 01–10–2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿಗಳ ಪರವಾಗಿ ಶ್ರೀ ಎ ಎಫ ಪಿ ವಕೀಲರಿಂದಃ

ನಿಪಿ – 5 ರ ಮ್ಯೂಟೇಶನ ತಕರಾರು ದಾಖಲಾಗಿ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿ ಅವು ಸೃಷ್ಟಿಸಿದ ದಾಖಲೆ ಇರುತ್ತದೆ ಎಂದು ನುಡಿದಿರುತ್ತಾರೆ. ಅದೇ ರೀತಿ ನಿಪಿ – 7 ರಲ್ಲಿಯ ಮ್ಯೂಟೇಶನ ಸಹ ತಕರಾರರಿಗೆ ಒಳಪಟ್ಟು ಮಂಜೂರಾಗಿರುತ್ತವೆ ಎಂದರೆ ಸರಿಯಲ್ಲ. ನನ್ನ ತಾಯಿ ಗ್ರಾಮ ಲೆಕ್ಕಾಧಿಕಾರಿ ಮತ್ತು ತಹಶೀಲ್ದಾರ ಮುಂದೆ ಹಕ್ಕು ದಾಖಲೆಗೆ ಲಿಖಿತ ತಕರಾರು ಸಲ್ಲಿಸಿದರು ಎಂದರೆ ಸರಿಯಲ್ಲ. ಸದರಿ ಲಿಖಿತ ತಕರಾರನ್ನು ನೊಂದಾಯಿತ ಅಂಚೆ ಮೂಲಕ ಸಲ್ಲಿಸಿದರು ಎಂದರೆ ಸರಿಯಲ್ಲ. ನನ್ನ ತಾಯಿ ಸಲ್ಲಿಸಿದ ಲಿಖಿತ ತಕರಾರಿನ ಮೇಲೆ ಉಪ ತಹಶೀಲ್ದಾರ ನಾಡ ಕಚೇರಿ ನೇಸರಗಿ ಇವರು ಮುಂದೆ ಆರ್ ಟಿ ಎಸ್ ಎಸ್ ಆರ್ 34 ಮತ್ತು 35 / 2001–2002 ಪ್ರಕರಣ ನಡೆದಿರುತ್ತದೆ ಎಂದರೆ ಸರಿಯಲ್ಲ. ಸದರಿ ಆರ್ ಟಿ ಎಸ್ ಪ್ರಕರಣಗಳಲ್ಲಿ ನನ್ನ ತಾಯಿ ಎಸ್ ಡಿ ಅಲ್ಲಪ್ಪನವರ ಎಂಬ ವಕೀಲರ ಮೂಲಕ ಹಾಜರಾಗಿ ಲಿಖಿತ ವಾದವನ್ನು ಸಹ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಆರ್ ಟಿ ಎಸ್ ಪ್ರಕರಣಗಳಲ್ಲಿ ನನ್ನ ತಾಯಿ ಪರವಾಗಿ ಶಿವರಾಯ ಶಂಕರೆಪ್ಪ ಜೂಟನವರ ಎಂಬುವವರ ಸಾಕ್ಷಿ ಮಾಡಿಸಿದ್ದರು ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ 2001 ರಲ್ಲ್ ಆಸ್ತಿಯಲ್ಲಿ ಪಾಲು ಬೇಕೆಂದು ಕೇಳಲು

ಪ್ರಾರಂಬಿಸಿದೇವು ಎಂದರೆ ಸರಿಯಲ್ಲ. 2001-2002 ನೇ ಸಾಲಿನಲ್ಲಿ ನನ್ನ ತಾಯಿ ಆರ್ ಟಿ ಎಸ್ ಪ್ರಕರಣದಲ್ಲಿ ತಕರಾರು ಸಲ್ಲಿಸಿದ್ದರೂ ಸಹ ಸಲ್ಲಿಸಿರುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 40 ಮತ್ತು 41 ರಲ್ಲಿ ಆಸ್ತಿಗಳು 1950 ರಲ್ಲಿ ಪ್ರತಾಪ ಸಿಂಗ ರವರಿಗೆ ಹಕ್ಕು ದಾಖಲೆ ನಂ. 1110 ರ ಪ್ರಕಾರ ಬಂದಿರುತ್ತವೆ ಎಂದರೆ ಸುಳ್ಳು. ಸದರಿ ಆಸ್ತಿಗಳು ಕೇಸರ ಸಿಂಗರವರು ದತ್ತಕ್ಕೆ ಹೊಗಿರುವುದರಿಂದ ಪ್ರತಾತ ಸಿಂಗ ರವರರಿಗೆ ಸಂಬಂದಿಸಿದ ಆಸ್ತಿಗಳು ಪ್ರತಿವಾದಿಗಳ ಮನೆತನಕ್ಕೆ ಉಳಿದಿರುತ್ತವೆ ಎಂದರೆ ಸರಿ. ಹಕ್ಕು ದಾಖಲೆ ನಂ. 2439 ರ ಪ್ರಕಾರ ಕೇಸರ ಸಿಂಗರವರಿಗೆ ಬಂದಿರುವಂತಹ ಆಸ್ತಿಗಳು ಬೇರೆ ಇರುತ್ತವೆ ಎಂದರೆ ಸರಿಯಲ್ಲ. ಪ್ರತಾಪ ಸಿಂಗ ರವರ ಮರಣದ ನಂತರ ಆತನ ಆಸ್ತಿಗಳಾದ ಸರ್ವೆ ನಂ. 40 ಮತ್ತು 41 ಗಳು ಕೇಸರ ಸಿಂಗ ರವರ ಹೆಸರಿಗೆ ವಾರಸಾ ದಾಖಲಾಗಿರುತ್ತವೆ ಎಂದರೆ ಸರಿ. ಪ್ರತಾಪ ಸಿಂಗ ರವರ ಮರಣದ ನಂತರ ಸದರಿ ಸರ್ವೆ ನಂ. 40 ಮತ್ತು 41 ಗಳು ಲಕ್ಷ್ಮೀ ಬಾಯಿ ಒಬ್ಬಳಿಗೆ ಮಾತ್ರ ವಾರಸಾ ಮೂಲಕ ಬಂದಿರುತ್ತವೆ ಎಂದರೆ ಸರಿ. ಕೇಸರ ಸಿಂಗ ದತ್ತಕ ತಂದೆ ಭವನ ಸಿಂಗ ದಿನಾಂಕ 25-01-2001 ರಂದು ಮೃತ ಪಟ್ಟಿರುತ್ತಾರೆ ಎಂದರೆ ನಿಜ. ದಿನಾಂಕ 13-02-2001 ರಂದು ಸತ್ತ ವ್ಯಕ್ತಿ ಕೇಸರ ಸಿಂಗ ದತ್ತಕ ತಂದೆ ಭವನ ಸಿಂಗ ಹೆಸರಿನಿಂದ ಆಸ್ತಿ ದಾಖಲಾಯಿತು ಎಂದರೆ ಸರಿಯಲ್ಲ. ಈ ಕುರಿತು ಹಕ್ಕು ದಾಖಲೆ ನಂ. 2979 ಮೂಂಜೂರಾಯಿತು ಎಂದರೆ ಸರಿಯಲ್ಲ. ಸದರಿ ಕೇಸರ ಸಿಂಗ ದತ್ತಕ ತಂದೆ ಭವನ ಸಿಂಗ ರವರು ಆಸ್ತಿ ಸಂಖ್ಯೆ ಸರ್ವೆ ನಂ. 40 ಮತ್ತು 41 ರ ಯಾವತ್ತು ಮಾಲಿಕ ಮತ್ತು ಕಬ್ಜಾದಾರ ಇರಲಿಲ್ಲ ಎಂದರೆ ಸರಿಯಲ್ಲ.

ಸದರಿ ಆಸ್ತಿಗಳಿಗೆ ಲಕ್ಷ್ಮೀಬಾಯಿ ಗಂಡ ಪ್ರತಾಪ ಸಿಂಗ ಬುಲಾಕೆ ಮಾತ್ರ ಮಾಲಿಕ ಮತ್ತು ಕಬ್ಜಾದಾರರು ಇದ್ದರು ಎಂದರೆ ಸರಿಯಲ್ಲ.

ಕೇಸರ ಸಿಂಗ, ಪ್ರತಾಪ ಸಿಂಗ, ಭವಾನ ಸಿಂಗ ರವರ ಮಧ್ಯೆ ಹಕ್ಕು ದಾಖಲೆ ನಂ. 1608 ರ ರಿತ್ಯ ವಾಟ್ನಿ ಆಗಿರುತ್ತದೆ ಎಂದರೆ ಸುಳ್ಳು. ಹಕ್ಕು ದಾಖಲೆ ನಂ. 1607 ರ ರಿತ್ಯ ಸದರಿ ಈ ಮೆಲಿನ ಜನರ ಹೆಸರಿಗೆ ವಾರಸಾ ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ಲಕ್ಷ್ಮೀಬಾಯಿ ಗಂಡ ಪ್ರತಾಪ ಸಿಂಗ ಬುಲಾಕೆ ಯವರು ತಮ್ಮ ಸ್ವಂತ ಆಸ್ತಿಗಳಾದ ಸರ್ವೆ ನಂ. 40, 41 ಪೂರ್ಣ ಮತ್ತು ಸರ್ವೆ ನಂ. 5 ರಲ್ಲಿ ಅರ್ಧ ಹಿಸ್ಸೆ ಯನ್ನು ಎಲ್ಲ ಪ್ರತಿವಾದಿಗಳಿಗೆ ನೊಂದಾಯಿತ ಮೃತ್ಯು ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಂತರ 2006 ರಲ್ಲಿ 1 ರಿಂದ 3 ನೇ ಪ್ರತಿವಾದಿಗಳು ತಮ್ಮ ಮಧ್ಯೆ ವಾಟ್ನಿ ಮಾಡಿಕೊಂಡು ತಮ್ಮ ತಮ್ಮ ಹಿಸ್ಸೆ ಆಸ್ತಿಗಳನ್ನು ಪ್ರತ್ಯೇಕ ಕಬ್ಜಾ ವಹಿವಾಟು ಮಾಡುತ್ತಾ ಬರುತ್ತಿದ್ದಾರೆ ಎಂದರೆ ಸುಳ್ಳು. 1997 ರಲ್ಲಿ ಲಕ್ಷ್ಮೀಬಾಯಿ ತಂದೆ ಪ್ರತಾಪ ಸಿಂಗ ಬುಲಾಕೆಯವರು ಸರ್ವೆ ನಂ. 40, 41 ಮತ್ತು ಸರ್ವೆ ನಂ. 5 ಕ್ಕೆ ಸಂಬಂದಿಸಿದಂತೆ ಎಲ್ಲ ಪ್ರತಿವಾದಿಗಳಿಗೆ ಹಕ್ಕು ಬಿಟ್ಟು ಪತ್ರ ಮಾಡಿ ಕೊಟ್ಟಿರುತ್ತಾರೆ ಎಂದರೆ ಸುಳ್ಳು. 1979 ರಲ್ಲಿ 6 ನೇ ಪ್ರತಿವಾದಿ ಖರೀದಿ ಮಾಡಿರುವ ಆಸ್ತಿ ಸರ್ವೆ ನಂ. 40/2 ನ್ನು ಅಬ್ದುಲ ಮಜಿದ ಅವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನಂತರ ಸದರಿ ಆಸ್ತಿಯನ್ನು ಅಬ್ದುಲ ಮಜಿದ ಅವರು ಬಾಬು ನೇಸರಗಿಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಪುನಃ 6 ನೇ ಪ್ರತಿವಾದಿ 2010 ರಲ್ಲಿ ಸದರಿ ಸರ್ವೆ ನಂ.

40/2 ನ್ನು ತನ್ನ ಸ್ವಂತ ದುಡಿಮೆಯ ಸಂಪಾದನೆಯಿಂದ ಖರೀದಿ ಮಾಡಿದರು ಎಂದರೆ ಸಾಕ್ಷಿ ಒಟ್ಟು ಕುಟುಂಬದ ಉತ್ಪನ್ನದಿಂದ ಖರೀದಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. 6 ನೇ ಪ್ರತಿವಾದಿ ತನ್ನ ಸ್ವಂತ ಹಣದಿಂದ ಖರೀದಿ ಮಾಡಿದ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ವಾದ ಪತ್ರದಲ್ಲಿ ರಾಜಿ ಡಿಕ್ರಿ ಪಡೆದಿರುತ್ತಾರೆ ಎಂದು ಹೇಳಿ ಬರೆಸಿರುತ್ತೇನೆ. ಅಸಲು ದಾವಾ ಸಂಖೆ 82/2014 ಮತ್ತು ಸಸಲು ದಾವಾ ಸಂಖ್ಯ 91/2017 ರಲ್ಲಿ ಡಿಕ್ರಿ ಪಡೆದಿರುತ್ತಾರೆ. ಸದರಿ ರಾಜಿ ಡಿಕ್ರಿಗಳು ಯಾವ ಯಾವ ಸರ್ವೆ ನಂಬರಗೆ ಸಂಬಂದ ಪಟ್ಟಂತೆ ಆಗಿರುತ್ತವೆ ಎಂದರೆ ಸರ್ವೆ ನಂ. 40/1, 41 ಮತ್ತು ಸರ್ವೇ ನಂ. 5 ರಲ್ಲಿ ಆಸ್ತಿಗಳಿಗೆ ಸಂಬಂದಿಸಿದತೆ ರಾಜಿ ಡಿಕ್ರಿ ಪಡೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ದಾವಾ ಸಲ್ಲಿಸುವ ಸಮಯದಲ್ಲಿ ದಾವಾ ಆಸ್ತಿಗಳ ಉತಾರದಲ್ಲಿ ಗಣಪತ ಸಿಂಗ, ವಿಟ್ಟಲ ಸಿಂಗ ಮತ್ತು ಸತ್ಯ ನಾರಾಯಣ ಸಿಂಗ ರವರ ಹೆಸರು ದಾಖಲಿತ್ತು. ದಾವಾ ಸಲ್ಲಿಸುವಾಗ ದಾವಾ ಆಸ್ತಿಗಳ ಉತಾರಗಳು ಅಂಬಾಬಾಯಿ ಗಂಡ ಕೇಸರ ಸಿಂಗ ಬುಲಾಕೆಯವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಸದರಿ ಅಂಬಾಬಾಯಿ ಗಂಡ ಕೇಸರ ಸಿಂಗ ಬುಲಾಕೆ ಯವರ ಹೆಸರಿನಲ್ಲಿ ಇರುವ ಆಸ್ತಿಗಳು ಆಕೆಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಸಲ್ಲಿಸುವ ಸಮಯದಲ್ಲಿ ಅಂಬಾಬಾಯಿ ಗಂಡ ಕೇಸರ ಸಿಂಗ ಬುಲಾಕೆ ಯವರನ್ನು ಹೊರತು ಪಡಿಸಿ ದಾವಾ ಆಸ್ತಿಗಳಲ್ಲಿ ಬೇರೆ ಯಾರದು ಹಕ್ಕು ಮತ್ತು ಹಿತಾಸಕ್ತಿ ಇರಲಿಲ್ಲ

ಎಂದರೆ ಸರಿಯಲ್ಲ. ಹೀಗಾಗಿ ಸದರಿ ಅಂಬಾಬಾಯಿ ಗಂಡ ಕೇಸರ ಸಿಂಗ ಬುಲಾಕೆ ಯವರು ತನ್ನ ಸ್ವಂತ ಆಸ್ತಿಗಳನ್ನು 1 ರಿಂದ 3 ನೇ ಪ್ರತಿವಾದಿಗಳಿಗೆ ಕೋರ್ಟನಲ್ಲಿ ರಾಜಿ ಡಿಕ್ರಿ ಮೂಲಕ ಹಕ್ಕು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸುಳ್ಳು. ನಂತರ 1 ರಿಂದ 3 ನೇ ಪ್ರತಿವಾದಿಗಳು ಬಂದಂತ ಆಸ್ತಿಗಳನ್ನು ರಾಜಿ ಡಿಕ್ರಿ ಮಾಡಿಕೊಂಡು ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ನಮಗೆ ಗೊತ್ತಿಲ್ಲದೇ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಹೀಗಾಗಿ 1 ರಿಂದ 3 ನೇ ಪ್ರತಿವಾದಿಗಳು ರಾಜಿ ಡಿಕ್ರಿ ಪ್ರಕಾರ ದಾವಾ ಆಸ್ತಿಗಳ ಸಂಪೂರ್ಣ ಮಾಲಿಕರು ಕಬ್ಜಾದಾರರು ಇರುತ್ತಾರೆ ಎಂದರೆ ಸುಳ್ಳು. ನಾವು ದಾವಾ ಆಸ್ತಿಗಳ ಕಬ್ಜಾದಲ್ಲಿ ಇದ್ದೇವೆ ಎಂದು ತೋರಿಸಲು ಯಾವ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನಾವು ಒಟ್ಟು ಕುಟುಂಬದಲ್ಲಿ ಇದ್ದೇವೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಗಳ ಕರ ಪಾವತಿಸಿದ ಬಗ್ಗೆ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ನಮ್ಮ ಕಾಕಾಗಳು ತುಂಬುತ್ತಾ ಬರುತ್ತಿದ್ದಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ದಾವಾ ಆಸ್ತಿಗಳಲ್ಲಿನ ಉತ್ಪನ್ನದಲ್ಲಿ ನಾವು ಪಾಲು ಪಡೆಯುತ್ತಿದ್ದ ಬಗ್ಗೆ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಎಲ್ಲರೂ ಸಾಮೂಹಿಕ ವಾಗಿ ಸ್ವಾಧೀನಾನುಬೋಗ ಮಾಡುತ್ತಿದ್ದೇವೆ ಎಂದು ನುಡಿದಿರುತ್ತಾರೆ . ಈ ಕುರಿತು ನಾನು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 2001 ರಿಂದ ನಾನು ಮತ್ತು ನನ್ನ ತಾಯಿ ಪಾಲು ಕೇಳುತ್ತಾ ಬರುತ್ತಿದ್ದುದರಿಂದ ಪ್ರಸ್ತುತ ದಾವೆ ಕಾಲ ಮಿತಿಯಿಂದ ಬಾದಕ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಮೇಲೆ ನಮಗೆ ಯಾವುದೇ ಹಕ್ಕು ಹಿತಾಡಸ್ಕ್ತಿ ಇಲ್ಲದೇ ಇದ್ದರೂ ಸಹ ಖೊಟ್ಟಿ ದಾವೆ ಸಲ್ಲಿಸಿ ಖೊಟ್ಟಿ

ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ - ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.